ಹರಿಹರ ಪಾಲಿಫೈಬರ್ಸ್ ಸಂಸ್ಥೆಯಿಂದ ಮೂಲಿನ ನೀರನ್ನು ತುಂಗಭದ್ರಾ ನದಿಗೆ ಬಿಡುತ್ತಿರುವ ಬಗ್ಗೆ.

೨೧೦ ಶ್ರೀ ಬಿ. ಎ. ಉಮ್ಮಾರಬ್ಬ.— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಿಹರ ಪಾಲಿಫೈಬರ್ಸ್ ಸಂಸ್ಥೆಯಿಂದ ಮೇಲಿನ ನೀರನ್ನು ತುಂಗಭದ್ರಾ ನದಿಗೆ ಬಿಡುತ್ತಿರುವುದನ್ನು ನಿಲ್ಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಇದರಿಂದ ಧಾರವಾಡ ಜಿಲ್ಲೆಯ ರಾಣೆಬೆನ್ನೂರ ತಾಲ್ಲೂಕಿನಲ್ಲಿ ಉಂಟಾಗಿರುವ ವಿಶೇಷ ರೋಗಗಳ ಬಗ್ಗೆ ಸರ್ಕಾರವು ಗಮನ ಹರಿಸಿದೆಯೇ?

ಇ) ಈ ಪರಿಸರ ಮಾಲಿನ್ಯ ತಡೆಯಲ್ಲಿ ಸರ್ಕಾರ ಉಗ್ರ ಕ್ರಮವೇಕೆ ಕೈಗೊಳ್ಳುತ್ತಿಲ್ಲ?

ಶ್ರೀ ಜೆ.ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಕೊಳಚೆ ನೀರನ್ನು ಶುದ್ಧೀಕರಿಸಿ ಮಾತ್ರ ನದಿಯಲ್ಲಿ ಬಿಡಲಾಗುತ್ತದೆ.

ಆ) ಮಾಲಿನ್ಯ ನೀರಿನಿಂದ ಆಗಿರುವ ಯಾವ ರೀತಿಯ ವಿಶೇಷ ರೋಗ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಅಸಂಘಟಿತ ಕಾರ್ಮಿಕರ ಕನಿಷ್ಟ ವೇತನದ ಬಗ್ಗೆ.

೧೨೭ ಶ್ರೀ ಆರ್. ವೆಂಕಟರಾವಂಯ್ಯ (ಮುಳಬಾಗಿಲು).— ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಅವರಿಗೆ ಕನಿಷ್ಟ ವೇತನವನ್ನು ಸರ್ಕಾರದವರು ಘೋಷಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ ಎಷ್ಟು ಉದ್ಯಮಗಳಲ್ಲಿ ಘೋಷಿಸಲಾಗಿದೆ ಹಾಗೂ ಎಷ್ಟು ಕಾರ್ಮಿಕರಿಗೆ ಇದರಿಂದ ಸೌಲಭ್ಯ ದೊರಕಿದೆ?

ಈ) ಉಳಿದ ಇತರ ಉದ್ಯಮಗಳಂ ಯಾವಾಗ ಕನಿಷ್ಟ ವೇತನವನ್ನು ಘೋಷಿಸಲಾಗುವುದು?

ಶ್ರೀ ಡಿ. ಮಂಜುನಾಥ (ಕಾರ್ಮಿಕ ಸಚಿವರು)—.

ಅ) ಸುಮಾರು ೪೮,೮೭,೦೦೦.

ಆ) ಕೆಲವು ಉದ್ದಿಮೆಗಳಲ್ಲಿ ಕನಿಷ್ಟ ವೇತನವನ್ನು ನಿಗದಿ ಮಾಡಲಾಗಿದೆ.

ಇ) ಪ್ರಸ್ತುತದಲ್ಲಿ ೪೬ ಕೈಗಾರಿಕೆಗಳನ್ನು ಕನಿಷ್ಟ ವೇತನ ಕಾಯಿದೆ ೧೯೪೮ರ ಅಧಿನಿಯಮದಲ್ಲಿ (ಷೆಡ್ಯೂಲ್) ಒಳಪಡಿಸಿದೆ, ಅವುಗಳ ಪೈಕಿ ೩೧ ಉದ್ಯಮಗಳಿಗೆ ಕನಿಷ್ಟ ವೇತನವನ್ನು ನಿಗದಿಗೊಳಿಸಲಾಗಿದೆ. ಹಾಗೂ ಸುಮಾರು ೪೨ ಲಕ್ಷ ಅಸಂಘಟಿತ ಕಾರ್ಮಿಕರಿಗೆ ಇದರಿಂದ ಸೌಲಭ್ಯ ದೊರಕಿದೆ.

ಈ) ಸುಮಾರು ೬ ಉದ್ದಿಮೆಗಳಿಗೆ ಕನಿಷ್ಟ ವೇತನವನ್ನು ನಿಗದಿ ಮಾಡಲು ಕ್ರಮ ಪ್ರಾರಂಭಿಸಿದ್ದೆ, ಉಳಿದವನ್ನು ಹಂತ ಹಂತವಾಗಿ ನಿಗದಿ ಮಾಡಲಾಗುವುದಂ.

ಬೆಂಗಳೂರು ಮಹಾ ನಗರದಲ್ಲಿ ಕೊಳಚೆ ನೀರು ಹರಿಯುತ್ತಿರುವ ಬಗ್ಗೆ.

೨೦೫ ಶ್ರೀ ಉಮ್ಮಾರಬ್ಬ (ವಿಟ್ಲ).— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?